# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾನ್ಯ ಜಂಟಿ ಆಯುಕ್ತರು, ಬಿಬಿಎಂಪಿ ಮಹದೇವಪುರ ವಲಯ ರವರ ಕಛೇರಿ ಆದೇಶ ಸಂಖ್ಯೆ: ಜಂಆ/ಮವ/ಪಿಎಸ್/4486/21–22, ದಿನಾಂಕ:05/01/2022 ರಂತೆ ದಿನಾಂಕ: 05/01/2022 ರಂದು ಸಂಜೆ 04–00 ಗಂಟೆಗೆ **Deter committee for covid-19** ಸಂಬಂಧ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:85–ದೊಡ್ಡನೆಕ್ಕುಂದಿ ವಾರ್ಡ್ ಕಛೇರಿ ಎ.ಇ.ಸಿ.ಎಸ್ ಬಡಾವಣೆ ಸಭೆಯಲ್ಲಿ ಹಾಜರಾದ ಅಧಿಕಾರಿ / ಸಿಬ್ಬಂದಿಗಳು / ವಾರ್ಡ್ ಸಮಿತಿ ಸದಸ್ಯರುಗಳು, ಸ್ವಯಂ ಸೇವಕರುಗಳೊಂದಿಗೆ ನಡೆದ ಸಭೆಯ ನಡವಳಿಗಳು

| ಕ್ರ.ಸಂ | ಹಾಜರಾಗಿದ್ದ ಅಧಿಕಾರಿಗಳು | ನೋಡಲ್ ಅಧಿಕಾರಿಗಳು |
|---|---|---|
| 1. | ಶ್ರೀ. ಪ್ರಕಾಶ್ | ನೋಡಲ್ ಅಧಿಕಾರಿ ಹಾಗೂ ಸಹಾಯಕ ನಿರ್ದೇಶಕರು ನಗರ ಯೋಜನೆ ಮಹದೇವಪುರ ವಲಯ |
| 2. | ಡಾ॥ ಪ್ರಮೀಳ | ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ದೊಡ್ಡನೆಕ್ಕುಂದಿ |
| 3. | ಡಾ॥ ರೂಪ | ಮೆಡಿಕಲ್ ಆಫೀಸರ್, ಕೋವಿಡ್ ವೈದ್ಯಾಧಿಕಾರಿಗಳು |
| 4. | ಶ್ರೀ. ಸೋಮನಾಥ ಜಾದವ್ | WDC ಕಾರ್ಯದರ್ಶಿ, ಸಹಾಯಕ ಅಭಿಯಂತರರು / ಸಹಾಯಕ ನಿರ್ದೇಶಕರ ಕಛೇರಿ ನಗರ ಯೋಜನೆ ಮಹದೇವಪುರ ವಲಯ |
| 5. | ಶ್ರೀ. ರಾಚೆಯಪ್ಪ | ಸಹಾಯಕ ಅಭಿಯಂತರರು ವಾರ್ಡ್–85, ವಾರ್ಡ್ ಕಾರ್ಯದರ್ಶಿ |
| 6. | ಶ್ರೀ. ಟಿ.ಗೋಪಾಲ್ | ಕಂದಾಯ ಪರಿವೀಕ್ಷಕರು 85 |
| 7. | ಶ್ರೀ. ಮಂಜುನಾಥ್ .ಎಸ್ | ಕಂದಾಯ ಪರಿವೀಕ್ಷಕರು 85 |
| 8. | ಶ್ರೀ. ಹನುಮೇಗೌಡ .ಸಿ.ಡಿ | ಕಂದಾಯ ಪರಿವೀಕ್ಷಕರು 85 |
| 9. | ಶ್ರೀ. ಎಮ್.ದೇವರಾಜು | ಹಿರಿಯ ಆರೋಗ್ಯ ಪರಿವೀಕ್ಷಕರು |
| 10. | ಶ್ರೀ. ರಘುನಂದನ್.ಎಮ್.ಜಿ | ಕಿರಿಯ ಆರೋಗ್ಯ ಪರಿವೀಕ್ಷಕರು |
| 11. | ಶ್ರೀ. ಮಂಜುನಾಥ್. ಟಿ.ಎ | ತೆರಿಗೆ ನಿರೀಕ್ಷಕರು, ವಾರ್ಡ್ ನಂ.85 |
| 12. | ಶ್ರೀ.ಹೇಮರಾಜು | ತೆರಿಗೆ ನಿರೀಕ್ಷಕರು |
| 13. | ಶ್ರೀ. ಗೌತಮ್ ಅರವಿಂದ್ | ತೆರಿಗೆ ನಿರೀಕ್ಷಕರು |
| 14. | ಶ್ರೀ. ರಮೇಶ್. ಜಿ | ತೆರಿಗೆ ನಿರೀಕ್ಷಕರು, ವಾರ್ಡ್ ನಂ.85 |
| 15. | ಶ್ರೀ. ಸುಂದರಯ್ಯ | ತೆರಿಗೆ ನಿರೀಕ್ಷಕರು, ವಾರ್ಡ್ ನಂ.85 |
| 16. | ದೊಡ್ಡನೆಕ್ಕುಂದಿ ವಾರ್ಡ್‌ನ ಹಾಜರಿದ್ದ ಎಲ್ಲಾ ಶಕ್ತಿ ಕೇಂದ್ರದ ಅಧ್ಯಕ್ಷರುಗಳು ಹಾಗೂ ಸ್ವಯಂಸೇವಕರುಗಳು | |

ಪು.ತಿ.ನೋ.

ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ಸಿಬ್ಬಂದಿ ಮತ್ತು ಹಾಜರಿದ್ದ ವಾರ್ಡ್‌ನ ಎಲ್ಲಾ ಸಮಿತಿ ಸದಸ್ಯರನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

1. ಮಾರ್ಷಲ್ಸ್, ಆಶಾಕಾರ್ಯಕರ್ತರು ಸಭೆಗೆ ಗೈರು ಹಾಜರಾಗಿದ್ದುದರಿಂದ ಸದರಿ ಸಿಬ್ಬಂದಿಗಳು ಮುಂದಿನ ಸಭೆಯಲ್ಲಿ ತಪ್ಪದೇ ಹಾಜರಾಗಲು ತಿಳಿಸಲಾಯಿತು.

2. ವಾರ್ಡ್ ವ್ಯಾಪ್ತಿಯ ಎಲ್ಲಾ ಮನೆ ಮನೆ ಸರ್ವೆ ಮಾಡಿ ಮೊದಲನೇ ಡೋಸ್ ಹಾಗೂ ಎರಡನೇ ಡೋಸ್ ವ್ಯಾಕ್ಸಿನೇಷನ್ ಪಡೆಯದೇ ಇರುವವರನ್ನು ಗುರುತಿಸಿ ಅಂತಹವರಿಗೆ ಮೊದಲನೇ ಡೋಸ್ ಹಾಗೂ ಎರಡನೇ ಡೋಸ್ ವ್ಯಾಕ್ಸಿನೇಷನ್ ಕಡ್ಡಾಯವಾಗಿ ನೀಡಲು ತೀರ್ಮಾನಿಸಲಾಯಿತು.

3. ಕೋವಿಡ್ ಸೋಂಕಿತರನ್ನು ಗುರುತಿಸಿ ಅಂತಹವರನ್ನು ಹೋಮ್ ಕ್ವಾರಂಟೈನ್ ಮಾಡಲು ಹಾಗೂ ಅವಶ್ಯಕತೆ ಇದ್ದಲ್ಲಿ ಅಂತಹ ಸೋಂಕಿತರನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಗುರುತಿಸಿರುವ ಆಸ್ಪತ್ರೆಗಳಿಗೆ ಆಂಬ್ಯೂಲೆನ್ಸ್ ಮೂಲಕ ಕಳುಹಿಸಿಕೊಡಲು ತೀರ್ಮಾನಿಸಲಾಯಿತು.

4. ಐದು ಅಥವಾ ಹೆಚ್ಚಿನ ಸಂಖ್ಯೆಯ ಕೋವಿಡ್ ಸೋಂಕಿತರು ಕಂಡುಬಂದಲ್ಲಿ ಅಂತಹ ಸ್ಥಳವನ್ನು ಕಡ್ಡಾಯವಾಗಿ ಕಂಟೈನ್‌ಮೆಂಟ್ ಜೋನ್ ಮಾಡಲು ತೀರ್ಮಾನಿಸಲಾಯಿತು.

5. ದಿನನಿತ್ಯ ಒಂದು ಆರೋಗ್ಯ ಕೇಂದ್ರದಲ್ಲಿ ಸುಮಾರು 800-900 ಸಾರ್ವಜನಿಕರಿಗೆ ಕೋವಿಡ್ ಟೆಸ್ಟಿಂಗ್ ಮಾಡಲು ಮಾನ್ಯ ಜಂಟಿ ಆಯುಕ್ತರು ಆದೇಶದಂತೆ ಸ್ವ್ಯಾಬ್ ಟೆಸ್ಟಿಂಗ್ ಮಾಡಲು ತೀರ್ಮಾನಿಸಲಾಯಿತು.

6. ಸ್ವ್ಯಾಬ್ ಟೆಸ್ಟ್‌ಗೆ ಹೆಚ್ಚಿನ ಸಿಬ್ಬಂದಿ ಹಾಗೂ ಟೆಸ್ಟಿಂಗ್ ಕಿಟ್‌ಗಳ ಅವಶ್ಯಕತೆ ಇದ್ದು, ವಲಯದ ಆರೋಗ್ಯ ವೈದ್ಯಾಧಿಕಾರಿಗಳಿಂದ ಪಡೆಯಲು ಹಾಗೂ ಸಿಬ್ಬಂದಿಗಳ ಕೊರತೆ ಇದ್ದು ಡೆಟರ್ ಕಮಿಟಿ ನೋಡಲ್ ಅಧಿಕಾರಿಗಳಿಂದ ಮಾನ್ಯ ಜಂಟಿ ಆಯುಕ್ತರ ಗಮನಕ್ಕೆ ತಂದು ಹೆಚ್ಚುವರಿ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ತೀರ್ಮಾನಿಸಲಾಯಿತು.

7. ವಾರ್ಡ್ ನಂ.85 ರ ದೊಡ್ಡನೆಕ್ಕುಂದಿ ವ್ಯಾಪ್ತಿಯಲ್ಲಿ ಬರುವ ವಸತಿ ಸಮುಚ್ಚದ RWA's ಅಧ್ಯಕ್ಷರನ್ನು ಸಂಪರ್ಕಿಸಿ ಹೋಮ್ ಕ್ವಾರಂಟೈನ್‌ನಲ್ಲಿರುವ ಸೋಂಕಿತರನ್ನು ಹೊರಗೆ ಬಾರದಂತೆ ತಡೆಯಲು ಭದ್ರತಾ ಸಿಬ್ಬಂದಿಯನ್ನು ನೇಮಿಸಲು ಹಾಗೂ ಸೋಂಕಿತರ ಮನೆಗೆ ದಿನನಿತ್ಯದ ವಸ್ತುಗಳಿಗೆ ಯಾವುದೇ ತೊಂದರೆಯಾಗದಂತೆ ಸರಬರಾಜು ಮಾಡಲು ಸಿಬ್ಬಂದಿಯನ್ನು ನೇಮಕಮಾಡಲು ಪತ್ರ ಬರೆಯಲು ತೀರ್ಮಾನಿಸಲಾಯಿತು

ಪು.ತಿ.ನೋ.

8. ವಸತಿ ಸಮುಚ್ಚಗಳಲ್ಲಿ ಕ್ಲಬ್‌ಹೌಸ್, ಜಿಮ್, ಸ್ವಿಮ್ಮಿಂಗ್‌ಪುಲ್ ಹಾಗೂ ಯಾವುದೇ ಗುಂಪಾಗಿ ಸೇರುವ ಕಾರ್ಯಕ್ರಮಗಳನ್ನು ಮಾಡದೇ ಇರುವ ಬಗ್ಗೆ ನೋಟೀಸ್ ನೀಡಲು ತೀರ್ಮಾನಿಸಲಾಯಿತು.

9. ವಿದೇಶ ಹಾಗೂ ಹೊರ ರಾಜ್ಯದಿಂದ ಬರುವ ಪ್ರಯಾಣಿಕರ ಮಾಹಿತಿಯನ್ನು ಸಂಗ್ರಹಿಸಿ ಅಂತಹವರನ್ನು ಗುರುತಿಸಿ ಸ್ವಾಬ್ ಟೆಸ್ಟ್ ಮಾಡಿ 07 ದಿನಗಳ ಕಾಲ ಹೋಮ್ ಕ್ವಾರಂಟೈನ್ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

10. ಟೆಸ್ಟಿಂಗ್ ಟೀಂ ಜೊತೆಯಲ್ಲಿ ಮಾರ್ಷಲ್‌ಗಳನ್ನು ನೇಮಿಸಿಕೊಂಡು ಶಾಲಾ ಕಾಲೇಜುಗಳಲ್ಲಿ 15 ರಿಂದ 18 ವರ್ಷದ ವಯಸ್ಸಿನ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ವ್ಯಾಕ್ಸಿನೇಷನ್ ನೀಡುವ ಬಗ್ಗೆ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ವೈದ್ಯಾಧಿಕಾರಿಗಳಿಗೆ ತಿಳಿಸಿ ತೀರ್ಮಾನಿಸಲಾಯಿತು.

11. ಸ್ವಾಬ್ ಟೆಸ್ಟಿಂಗ್ ಸಮಯದಲ್ಲಿ ಹೆಚ್ಚುವರಿಯಾಗಿ 08 ಮಾರ್ಷಲ್‌ಗಳ ಅವಶ್ಯಕತೆ ಇದ್ದು, ಈ ವಿಷಯವನ್ನು ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಗಮನಕ್ಕೆ ತಂದು ಹೆಚ್ಚುವರಿ ಮಾರ್ಷಲ್‌ಗಳನ್ನು ನಿಯೋಜಿಸಲು ಡೆಟರ್ ಕಮಿಟಿ ನೋಡಲ್ ಅಧಿಕಾರಿಗಳ ಮುಖಾಂತರ ಪತ್ರ ಬರೆಯಲು ತೀರ್ಮಾನಿಸಲಾಯಿತು.

12. ವಾರ್ಡ್ ನಂ.85-ದೊಡ್ಡನೆಕ್ಕುಂದಿ ರಸ್ತೆಯಲ್ಲಿ ತಳ್ಳುವ ಗಾಡಿ ವ್ಯಾಪಾರಿಗಳು ದಿನಸಿತ್ಯ ಗುಂಪು ಸೇರಿ ವ್ಯಾಪಾರ ನಡೆಸುತ್ತಿದ್ದು, ಸದರಿ ಅಂಗಡಿಗಳನ್ನು ಇನ್ನರ್ ಸರ್ಕಲ್ ಆಟದ ಮೈದಾನಕ್ಕೆ ಸ್ಥಳಾಂತರಿಸಲು ತೀರ್ಮಾನಿಸಲಾಯಿತು.

13. ನಿಯೋಜಿಸಿಕೊಂಡು ಸಾರ್ವಜನಿಕ ಸ್ಥಳಗಳಲ್ಲಿ ಆಟೋ ಮುಖಾಂತರ ಕೋವಿಡ್-19 ತೀವ್ರತೆಯ ಬಗ್ಗೆ ಪ್ರಚಾರ ಮಾಡಿ ಜಾಗೃತಿ ಮೂಡಿಸಲು ತೀರ್ಮಾನಿಸಲಾಯಿತು.

14. ಮಾಸ್ಕನ್ನು ಹಾಕದೇ ಸಾರ್ವಜನಿಕ ಸ್ಥಳಗಳಲ್ಲಿ ಓಡಾಡುವವರಿಗೆ ಕಡ್ಡಾಯವಾಗಿ ಮಾಸ್ಕ್ ಧರಿಸಲು ಜಾಗೃತಿ ಮೂಡಿಸಿ ಮಾರ್ಷಲ್‌ಗಳ ಮುಖಾಂತರ ಮಾಸ್ಕ್ ಹಾಕದೇ ರುವ ಸಾರ್ವಜನಿಕರಿಗೆ ದಂಡವಿಧಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

15. ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಆಟೋ ಟಿಪ್ಪರ್‌ಗಳಲ್ಲಿ ಧ್ವನಿವರ್ಧಕ ಮೂಲಕ ಕೋವಿಡ್-19ರ ಜಾಗೃತಿ ಮೂಡಿಸಲು ತೀರ್ಮಾನಿಸಲಾಯಿತು.

ಪು.ತಿ.ನೋ.

**Deter committee** ಸಭೆಯಲ್ಲಿ ವಾರ್ಡ್ ನೋಡಲ್ ಆಫೀಸರ್ ರವರ ಆದೇಶದಂತೆ ಇತರೆ ವಿಷಯಗಳ ಬಗ್ಗೆ ಚರ್ಚಿಸಿ ಈ ಮೇಲೆ ತೀರ್ಮಾನಿಸಿರುವ ಸಭೆಯ ತೀರ್ಮಾನವನ್ನು ಕಾರ್ಯಗತ ಮಾಡಲು ಸೂಚಿಸಿ ಮುಂದಿನ ಸಭೆಯಲ್ಲಿ ಅಧಿಕಾರಿಗಳು ಸೂಕ್ತ ಮಾಹಿತಿಗಳೊಂದಿಗೆ ಹಾಜರಿರಲು ಹಾಗೂ ವಾರಕ್ಕೊಮ್ಮೆ ಸಭೆ ನಡೆಸಲು ತೀರ್ಮಾನಿಸಿ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ
ಡೆಟರ್ ಕಮಿಟಿ
ಸಹಾಯಕ ಅಭಿಯಂತರರು / ಸಹಾಯಕ ನಿರ್ದೇಶಕರ
ಕಛೇರಿ ನಗರ ಯೋಜನೆ ಮಹದೇವಪುರ ವಲಯ

ನೋಡಲ್ ಅಧಿಕಾರಿಗಳು
ಡೆಟರ್ ಕಮಿಟಿ
ಸಹಾಯಕ ನಿರ್ದೇಶಕರು ನಗರ
ಯೋಜನೆ ಮಹದೇವಪುರ ವಲಯ

ಪ್ರತಿಯನ್ನು,

1. ಮಾನ್ಯ ಶಾಸಕರು ಹಾಗೂ ಮಾಜಿ ಸಚಿವರು ಮಾನ್ಯ ಶ್ರೀ.ಅರವಿಂದ ಲಿಂಬಾವಳಿ ರವರ ಕಛೇರಿಗೆ ಅವಗಾಹನೆಗೆ ಸಲ್ಲಿಸಿದೆ.
2. ಜಂಟಿ ಆಯುಕ್ತರು (ಮಹದೇವಪರು) ವಲಯ, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು, ಮಹದೇವಪುರ ವಿಭಾಗ ರವರ ಅವಗಾಹನೆಗೆ ಹಾಗೂ ಅಗತ್ಯ ಕ್ರಮಕ್ಕಾಗಿ ಸಲ್ಲಿಸಿದೆ
4. ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ರವರ ಸೂಕ್ತ ಕ್ರಮಕ್ಕಾಗಿ
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಹದೇವಪುರ ರವರ ಮಾಹಿತಿಗಾಗಿ ರವಾನಿಸಿದೆ.
6. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.